

ಹತ್ಯೆಗೊಳಗಾಗಿದ್ದ ಲೋರ್ಕಾ, ತನ್ನ ಕವನಗಳು ಹಾಗೂ ನಾಟಕಗಳ ಮೂಲಕ ಫ್ಯಾಸಿಸ್ಟ್ ವಿರೋಧಿಯಾಗಿದ್ದರು. ದಶಕಗಳ ಕಾಲ ನೆರೂಡ ಬದುಕು-ಬರಹವನ್ನು ಅಧ್ಯಯನ ಮಾಡಿ 'ನೆರೂಡ: ದಿ ಪೊಯೆಟ್ಸ್ ಕಾಲಿಂಗ್' ಎಂಬ ಪುಸ್ತಕವನ್ನು ರಚಿಸಿರುವ ಮೈಕ್ ಐಸ್ನರ್ ದಾಖಲಿಸಿರುವ ಹಾಗೆ, "ಆ ಸುದ್ದಿ ನೆರೂಡರನ್ನು ತೀವ್ರವಾಗಿ ಬೆಚ್ಚಿಬೀಳಿಸಿತು. ಸ್ನೇಹಿತನ ಹತ್ಯೆಯ ಭಯಾನಕತೆಯನ್ನು ಮೀರಿ, ಲೋರ್ಕಾ ಸಾವು ಇನ್ನೂ ಹೆಚ್ಚಿನದೇನನ್ನೋ ಪ್ರತಿನಿಧಿಸಿತು: ಲೋರ್ಕಾ ಕಾವ್ಯದ ಸಾಕಾರ ರೂಪವಾಗಿದ್ದರು; ಫ್ಯಾಸಿಸ್ಟರು ಕಾವ್ಯವನ್ನೇ ಹತ್ಯೆ ಮಾಡಿದಂತೆ ಭಾಸವಾಯಿತು." ಅಲ್ಲಿಯವರೆಗೆ ಪ್ರೇಮಕವಿಯೆಂದೇ ಹೆಸರಾಗಿದ್ದ ನೆರೂಡರ ಕಾವ್ಯವು ಹೊಸ ದಿಕ್ಕಿನೆಡೆ ಸಾಗಿತು. ಅದಕ್ಕೆ ದೊಡ್ಡ ಉದಾಹರಣೆ, 'ಐ ಎಕ್ಸ್‌ಪ್ಲೈನ್ ಥಿಂಗ್ಸ್' ಕವನದ ಈ ಸಾಲುಗಳು: "ಮತ್ತು ನೀವು ಕೇಳುತ್ತೀರಿ: ಅವನ ಕಾವ್ಯವು ಏಕೆ ಕನಸುಗಳು, ಎಲೆಗಳು ಮತ್ತು ಅವನ ಸ್ವದೇಶದ ಬೃಹತ್ ಜ್ವಾಲಾಮುಖಿಗಳ ಬಗ್ಗೆ ಏಕೆ ಮಾತನಾಡುವುದಿಲ್ಲ?"

ಇತ್ತೀಚಿನ ಸಂಶೋಧನೆಯು, ನೆರೂಡ ಗೆಳೆಯರಾಗಿದ್ದ ಚಿಲಿಯ ಎಡಪಂಥೀಯ ಸರ್ಕಾರದ ಅಧ್ಯಕ್ಷ ಸಾಲ್ವಡಾರ್ ಅಲೆಂಡೆ ಅವರನ್ನು ಪದಚ್ಯುತಗೊಳಿಸಿದ ಚಿಲಿಯ 1973ರ ಮಿಲಿಟರಿ ದಂಗೆಯ ಕೇವಲ 12 ದಿನಗಳ ನಂತರ ವಿರೋಧಿಗಳ ವಿಷಪ್ರಾಶನದಿಂದಾಗಿ ನೆರೂಡ ನಿಧನರಾದರೆಂದು ಹೇಳುತ್ತದೆ. ಕವಿ ಹಾಗೂ ರಾಯಭಾರಿ ಮಾತ್ರವಲ್ಲದೆ, ಕಮ್ಯುನಿಸ್ಟ್ ಪಾರ್ಟಿ ಆಫ್ ಚಿಲಿಯ ಸದಸ್ಯರಾಗಿದ್ದ ನೆರೂಡ, ಚಿಲಿಯ ಸರ್ವಾಧಿಕಾರಿ ಆಗಸ್ಟೊ ಪಿನುಶೆಯ ಪ್ರಬಲ ವಿರೋಧಿಯಾಗಿದ್ದರಿಂದ, ದಶಕಗಳಿಂದ ಅವರ ರಾಜಕೀಯ ಹತ್ಯೆಯ ಅನುಮಾನಗಳು ಉಳಿದಿವೆ.